## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 340 |
| 2 | ಸದಸ್ಯರ ಹೆಸರು | : | ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 10-12-2020 |
| 4 | ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಭಾರತ ಸರ್ಕಾರ Easy of doing Business Policy ಅಡಿಯಲ್ಲಿ Constructions of Building Permits ಪ್ರಕ್ರಿಯೆಯನ್ನು online (Single windows system for plan approval) ತಂತ್ರಾಂಶದಲ್ಲಿ ಅಳವಡಿಸಲು 2017ರಲ್ಲೇ ಸೂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ಹಾಗಿದ್ದಲ್ಲಿ, ಇದರ ಬಗ್ಗೆ ಈವರೆಗೆ ಬಿ.ಬಿ.ಎಂ.ಪಿ ಮತ್ತು ಬಿ.ಡಿ.ಎ ದವರು ಯಾವ ಕ್ರಮ ಜರುಗಿಸಿದ್ದಾರೆ; 2017 ರಿಂದ ಇಲ್ಲಿಯವರೆಗೆ ಕಾರ್ಯರೂಪಕ್ಕೆ ತರದ ಅಧಿಕಾರಿಗಳ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ Single Window Clearance System, Online Building Permit System (OBPS) ತಂತ್ರಾಂಶದ ಮೂಲಕ ಪಾಲಿಕೆ ವ್ಯಾಪ್ತಿಯಲ್ಲಿ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರಕ್ಕೆ ಸಲ್ಲಿಸುವ ಪ್ರಸ್ತಾವನೆಗಳನ್ನು ಸಂಪೂರ್ಣವಾಗಿ ಆನ್‌ಲೈನ್ ಮುಖಾಂತರವೇ ಅನುಮೋದಿಸಲಾಗುತ್ತಿದೆ ಹಾಗೂ ನಕ್ಷೆ ಮಂಜೂರಾತಿಗೆ ಸಂಬಂಧಿಸಿದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸುವ ಇಲಾಖೆಗಳ ತಂತ್ರಾಂಶದೊಂದಿಗೆ ಸಮನ್ವಯ ಸಾಧಿಸಲಾಗಿರುತ್ತದೆ.<br><br>ಮುಂದುವರೆದು, ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, E-Governance ರವರ ಆದೇಶದಂತೆ ಸದರಿ Single Window Clearance System, Online Building Permit System (OBPS) ತಂತ್ರಾಂಶವನ್ನು ಸಕಾಲ, ಡಿಜಿ ಲಾಕರ್ ಹಾಗೂ ಆಧಾರ್ ಕಾರ್ಡ್ ನಂಬರ್ ಇ-ಸಿಗ್ನೇಚರ್ ತಂತ್ರಾಂಶದೊಂದಿಗೆ ಸಮನ್ವಯ ಸಾಧಿಸಲಾಗಿರುತ್ತದೆ. |

...2.

| | | |
|---|---|---|
| | | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ Constructions of Building Permits ಪ್ರಕ್ರಿಯೆಯನ್ನು Online (Single Windows System for plan approval) ಪದ್ಧತಿ ಅಳವಡಿಸಲು ಇ-ಆಡಳಿತ ಇಲಾಖೆಯ Centre for Smart Governance (CSC) ರವರಿಗೆ ಕೋರಿದ್ದು, ತಂತ್ರಾಂಶದ ತಯಾರಿಕೆ ಹಂತದಲ್ಲಿರುತ್ತದೆ. ಹೀಗೆ Single Window Clearance System, Online Building Permit System (OBPS) ವ್ಯವಸ್ಥೆಯನ್ನು ಜಾರಿಗೊಳಿಸಲು ಬಿ.ಡಿ.ಎ. ಮತ್ತು ಬಿ.ಬಿ.ಎಂ.ಪಿ.ಯು ಕ್ರಮವಹಿಸುತ್ತಿರುವುದರಿಂದ, ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವ ಅಗತ್ಯತೆ ಇರುವುದಿಲ್ಲ. |
| ಇ) | ದೆಹಲಿ ಮತ್ತು ಮುಂಬೈ ನಗರಗಳಲ್ಲಿ ಮೇಲ್ಕಂಡ ಪ್ರಕ್ರಿಯೆಯನ್ನು ಎರಡು ವರ್ಷಗಳಿಂದ ಜಾರಿಗೊಳಿಸಲಾಗಿದ್ದು, ಬೆಂಗಳೂರು ನಗರದಲ್ಲಿ ಈ ಪದ್ಧತಿಯನ್ನು ಯಾವ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲಾಗುವುದು? | ಬೆಂಗಳೂರು ನಗರದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2018 ರಿಂದ ನಕ್ಷೆ ಮಂಜೂರಾತಿ ತಂತ್ರಾಂಶವನ್ನು ಅಳವಡಿಸಲಾಗಿತ್ತು. ಪ್ರಸ್ತುತ Single Window Clearance System, Online Building Permit System (OBPS) ತಂತ್ರಾಂಶವನ್ನು ದಿನಾಂಕ: 01-07-2020 ರಿಂದ ಜಾರಿಗೆ ಬರುವಂತೆ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಕ್ಕೆ ಸಲ್ಲಿಸುವ ಪ್ರಸ್ತಾವನೆಗಳನ್ನು ಸಂಪೂರ್ಣವಾಗಿ ಆನ್‌ಲೈನ್ ಮುಖಾಂತರವೇ (Paperless) ಅನುಮತಿ ನೀಡಲು ಅನುಷ್ಠಾನಗೊಳಿಸಲಾಗಿರುತ್ತದೆ.<br><br>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 2021-22ನೇ ಸಾಲಿನಿಂದ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. |

**ನಅಇ 385 ಎಂಎನ್‌ಯು 2020**

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ